ಹುಬ್ಬಳ್ಳಿ ನಗರದಲ್ಲಿ ಸಿಗ್ನಲ್‌ಲೈಟುಗಳು ಕಾರ್ಯನಿರ್ವಹಿಸದಿರುವುದು.

2096 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ಸಿಗ್ನಲ್ ದೀಪಗಳ ವ್ಯವಸ್ಥೆಯನ್ನು ಎಂದಿನಿಂದ ಜಾರಿಗೆ ತರಲಾಯಿತು, ಹಾಗೂ ಇದಕ್ಕೆ ತಗುಲಿದ ವೆಚ್ಚವೆಷ್ಟು?

ಆ) ಇದು ಜಾರಿಗೆ ತಂದಂದಿನಿಂದ ಇಲ್ಲಿಯವರೆಗೆ ಈ ದೀಪಗಳ ನಿರ್ವಹಣೆಗಾಗಿ ಖರ್ಚು ಮಾಡಲಾದ ಹಣವೆಷ್ಟು?

ಇ) ಈ ಸಿಗ್ನಲ್ ದೀಪಗಳನ್ನು ಯಾವ ಯಾವ ಸ್ಥಳಗಳಲ್ಲಿ ಅಳವಡಿಸಲಾಗಿದೆ?

ಈ) ನಗರದ ಈ ಸಿಗ್ನಲ್ ದೀಪಗಳು ಕಾರ್ಯ ನಿರ್ವಹಿಸದೆ ಸ್ಥಬ್ಧವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ದೀಪಗಳಿಲ್ಲದೆ ಆಗುತ್ತಿರುವ ಅಪಘಾತಗಳನ್ನು ತಡೆಯುವ ಸಲುವಾಗಿ ಕೂಡಲೇ ಸಿಗ್ನಲ್ ದೀಪಗಳ ದುರಸ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವ ಜೊತೆಗೆ ಮೊದಲು ಅಳವಡಿಸಿದ ಸಿಗ್ನಲ್ ದೀಪಗಳು ಕೆಲಸ ಮಾಡದೇ ಇರುವಂತಹ ಕಳಪೆ ಕಾಮಗಾರಿಗಳನ್ನು ಮಾಡಿದವರ ಮೇಲೆ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):

ಅ) 1-9-1986 ರಿಂದ ವೆಚ್ಚ ರೂ. 7,40,000 ಗಳು.

ಆ) ರೂ. 2815ಗಳು.

ಇ) ಕಿತ್ತೂರು ರಾಣಿ ಚೆನ್ನಮ್ಮ ವೃತ್ತ ಮತ್ತು ಬೃಂದಾವನ ವೃತ್ತ.

ಈ) ಇಲ್ಲ.

ಉ) ಸಿಗ್ನಲ್ ದೀಪಗಳು ಸುಸ್ಥಿತಿಯಲ್ಲಿವೆ. ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆಯನ್ನು ಸ್ಥಾಪನೆ ಮಾಡಿದ ನಂತರ ಸಿಗ್ನಲ್ ದೀಪಗಳ ಕಾರ್ಯಾಚರಣೆಗೆ ಹೆಚ್ಚಿನ ಅಡ್ಡಿಯಾಗಿರುತ್ತದೆ. ಆದ್ದರಿಂದ ಸದರಿ ಸಿಗ್ನಲ್ ದೀಪಗಳ ವ್ಯವಸ್ಥೆಯನ್ನು ಬೇರೆ ಯಾವುದಾದರೂ ವೃತ್ತ ಒಂದಕ್ಕೆ ಬದಲಾಯಿಸುವ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ.

ರಾಜ್ಯದ ಪೋಲೀಸ್ ಅಧಿಕಾರಿಗಳು, ಸಿಬ್ಬಂದಿ ವರ್ಗದ ಸಂಖ್ಯೆ ಕುರಿತು.

2085 - ಶ್ರೀ ಪಿ.ಜಿ.ಆರ್ ಸಿಂಧ್ಯ (ಕನಕಪುರ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪೋಲೀಸ್ ಇಲಾಖೆಯಲ್ಲಿರುವ ಅಧಿಕಾರಿಗಳ ಹಾಗೂ ಇತರೆ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು?

ಆ) ಇವರಲ್ಲಿ ಎಷ್ಟು ಜನರಿಗೆ ಸರ್ಕಾರದಿಂದ ವಸತಿ ಸೌಕರ್ಯವನ್ನು ಕಲ್ಪಿಸಲಾಗಿದೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):

ಅ) ಕಾರ್ಯನಿರ್ವಾಹಕ ಸಿಬ್ಬಂದಿಯ ಒಟ್ಟು ಸಂಖ್ಯೆ 48,978

ವಿವರ

ಗ್ರೂಪ್-ಎ ಮತ್ತು ಮೇಲ್ಪಟ್ಟ ಅಧಿಕಾರಿಗಳು	286
ಗ್ರೂಪ್ -ಬಿ	705
ಗ್ರೂಪ್ -ಸಿ	14,264

ಗ್ರೂಪ್ -ಡಿ	33,723
ಲಿಪಿಕ ಸಿಬ್ಬಂದಿಯ ಒಟ್ಟು ಸಂಖ್ಯೆ	2,135
ವಿವರ :	
ಗ್ರೂಪ್ -ಎ	1
ಗ್ರೂಪ್ -ಬಿ	37
ಗ್ರೂಪ್-ಸಿ	1,542
ಗ್ರೂಪ್ -ಡಿ	555

ಆ) ಸರ್ಕಾರದಿಂದ ವಸತಿ ಸೌಕರ್ಯವನ್ನು ಒದಗಿಸಲಾಗಿರುವ ಒಟ್ಟು ಸಂಖ್ಯೆ 22,539

1. ಡಿಜಿ ಮತ್ತು ಐಜಿಪಿ	1
2. ಎ.ಡಿಜಿಪಿ	1
3. ಐಜಿಪಿ	2
4. ಡಿಐಜಿಪಿ	8
5. ಎಸ್.ಪಿ.	37
6. ಡಿಎಸ್‌ಪಿ	79
7. ಸಿಪಿಐ	262
8. ಪಿಎಸ್‌ಐ	1,114
9. ಎಎಸ್‌ಐ	617
10. ಹೆಚ್‌ಸಿ	5,247
11. ಪಿಸಿಗಳು	15,171

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳಿಗಾಗಿ ಬಂದಿರುವ ಅರ್ಜಿಗಳು

2118 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳಿಗಾಗಿ ಯಾವಾಗ ಅರ್ಜಿಗಳನ್ನು ಕರೆಯಲಾಯಿತು ಹಾಗೂ ಇದಕ್ಕಾಗಿ ಬಂದ ಅರ್ಜಿಗಳೆಷ್ಟು?

ಆ) ಸಾರ್ವಜನಿಕರಿಂದ ಅರ್ಜಿಗಳನ್ನು ಕರೆದು ಹಲವಾರು ತಿಂಗಳುಗಳಾದರೂ ಇದುವರೆವಿಗೂ ನಿವೇಶನಗಳನ್ನು ನೀಡದಿರುವುದು ನಿಜವೇ?

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿವೇಶನಕ್ಕಾಗಿ ಎಲ್ಲೆಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ?

ಈ) ಅರ್ಜಿಗಳನ್ನು ಕರೆದು ಹಲವಾರು ತಿಂಗಳುಗಳಾಗಿರುವುದರಿಂದ ಸರ್ಕಾರ ಆದಷ್ಟು ಬೇಗ ಪ್ರಾಧಿಕಾರದಿಂದ ನಿವೇಶನಗಳನ್ನು ಹಂಚಲು ಕ್ರಮ ಕೈಗೊಳ್ಳುತ್ತದೆಯೇ?

ಉ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಮಿತಿಯನ್ನು ಪುನಃ ರಚಿಸಲಾಗಿದೆಯೇ?

ಊ) ಇಲ್ಲದಿದ್ದಲ್ಲಿ, ಯಾವಾಗ ಪುನಃ ರಚಿಸಲಾಗುವುದು?